# B.A IVth Semester

## Generic Elective Paper

## Unit II   Kinship and Family

**ಪೀಠಿಕೆ:** ಸಮಾಜಶಾಸ್ತ್ರದ  ಮೂಲಭೂತ ಕಲ್ಪನೆಗಳಾದ ಕುಟುಂಬ ವಿವಾಹ , ಶಿಕ್ಷಣ, ರಾಜಕೀಯ , ಧಾರ್ಮಿಕ ಸಂಸ್ಥೆಗಳು ಮಾನವನ ಮೂಲಭೂತ ಆಸಕ್ತಿಗಳನ್ನು ಈಡೇರಿಸಿಕೊಳ್ಳಲು ಸಹಕಾರಿಯಾದ ಸಂಘಗಗಳಾಗಿದ್ದು, ಅದರ ನಿಯಮ ಕಾರ್ಯ ವಿಧಾನಗಳು ಸಾಮೂಹಿಕ ಅಥವಾ ಸಾಮಜಿಕ ಚಟುವಟಿಕೆಗಳ ನಿಯಮ ಮತ್ತು ರೂಪಗಳನ್ನು ಪ್ರತಿಷ್ಠಾಪಿಸುತ್ತವೆ. ಈ ಎಲ್ಲಾ ವಿಷಯಗಳನ್ನು ಕುರಿತು ಚಿಂತಿಸುವ ಸಾಮಾಜಿಕ ಚಿಂತಕರು ಮಾನವನ ಸಾಮಾಜಿಕ ಜೀವನದ ದಿನನಿತ್ಯದ ಜೀವನಕ್ಕೆ ಸಂಬಂಧಿಸಿದಂತೆ ಕಾರ್ಯವನ್ನು ನಿರ್ವಹಿಸಲು ಅವಶ್ಯಕವಾಗಿರುವ ವ್ಯಕ್ತಿ ಮತ್ತು ವ್ಯಕ್ತಿಗಳ ನಡುವಿನ ಸಂಬಂಧಗಳು, ವ್ಯಕ್ತಿ ಮತ್ತು ಸಮೂಹಗಳ ನಡುವಿನ ಸಂಬಂಧಗಳನ್ನು ಪರಿಗಣಿಸಿ ಸಮಾಜದ ನಾನಾ ವ್ಯವಸ್ಥೆಗಳನ್ನು, ಸವಾಲುಗಳನ್ನು, ಪರಿವರ್ತನೆಗಳನ್ನು ವೀಕ್ಷಿಸಿ ಸಮಾಜ ಮತ್ತು ಸಂಸ್ಥೆಗಳ ನಡುವಿನ ಸಂಬಂಧವನ್ನು ಕಲ್ಪಿಸುವ ವ್ಯಕ್ತಿಯು ಹುಟ್ಟಿ ಬೆಳೆದು ಜವಾಬ್ದಾರಿಯನ್ನು ಕಲಿಸುವ ವಿವಾಹ , ಕುಟುಂಬ ಮತ್ತು ರಕ್ತಸಂಬಂಧಗಳು ವ್ಯಕ್ತಿ ಮತ್ತು ಸಮಾಜದಲ್ಲಿ ಎಷ್ಟು ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತವೆ ಎನ್ನುವುದು ತಿಳಿಯಬೇಕಾಗಿದೆ.

ವಿವಾಹ ಮತ್ತು ಕುಟುಂಬ ಒಂದೆ ನಾಣ್ಯದ ಎರಡು ಮುಕಗಳಿದ್ದಂತೆ ಈ ಎರಡು ಸಂಸ್ಥೆಗಳು ವ್ಯಕ್ತಿಯ ಮತ್ತು ಸಮೂಹದ ಹಿತಾಸಕ್ತಿಯನ್ನು ಕಾಪಾಡುವುದು, ಕುಟುಂಬದ ಸದಸ್ಯರ ಬೇಡಿಕೆಗಳನ್ನು ಈಡೇರಿಸುವುದು, ಕುಟುಂಬದ ಮಕ್ಕಳ ಪಾಲನೆ ಪೋಷಣೆ, ಸಾಮಾಜೀಕರಣಗೊಳಿಸುವದರ ಜೊತೆಗೆ ಅವರಲ್ಲಿ ಮಾನವೀಯ ಮೌಲ್ಯಗಳನ್ನು ಕಲಿಸುವುದು ಸಮಾಜದ ಜವಾಬ್ದಾರಿಯುತ ವ್ಯಕ್ತಿಯನ್ನಾಗಿ ಮಾಡಲಯ ಬಹುಮುಖ್ಯವಾದ ಪಾತ್ರವನ್ನು ವಹಿಸುವುದರಿಂದ ಕುಟುಂಬವು ಸಾಮಾಜಿಕ ಜೀವನಕ್ಕೆ ಸ್ಥಿರತೆಯನ್ನು ಒದಗಿಸಿಕೊಟ್ಟಿದೆ. ಈ ಕುಟುಂಬದ ಕಾರ್ಯಗಳು ಸದಸ್ಯರ ಯೋಗಕ್ಷೇಮವನ್ನು ಗಮನಿಸುವುದರ ಜೊತೆಗೆ ಸಮಾಜದಲ್ಲಿ ಅವರ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಲು ಬೆಂಬಲವನ್ನು ನೀಡುತ್ತವೆ. ಹೀಗಾಗಿ ವಿವಾಹದಿಂದ ಹೊಸಕುಟುಂಬವನ್ನು ಸ್ಥಾಪಿಸಿದರೆ, ಕುಟುಂಬ ಎಂಬ ಸಂಸ್ಥೆಯು

ವ್ಯಕ್ತಿಯ ಸಮಾಜಿಕ ಜೀವನಕ್ಕೆ ಸಿದ್ಧಗೊಳಿಸುತ್ತದೆ. ಇಂತಹ ಕುಟುಂಬವು ಎಲ್ಲರೂ ಹೊಂದಿರುತ್ತಾರೆ ಮತ್ತು ಹೊಂದಿರುಲೇಬೆಕಾಗುತ್ತದೆ. ಕಾರಣ ಕುಟುಂಬದ ರಕ್ತಸಂಬಂಧಗಳು, ಕಳ್ಳುಬಳ್ಳಿಗಳು ಪ್ರತಿಯೊಬ್ಬರ ಜೀವದಲ್ಲಿ ಮಹತ್ವಪೂರ್ಣವಾದ ಪಾತ್ರವನ್ನು ವಹಿಸುತ್ತದೆ. ಹೀಗಾಗಿ ವಿವಾಹ, ಕುಟುಂಬ ಮತ್ತು ರಕ್ತಸಂಬಂಧಗಳ ಮಹತ್ವವನ್ನು ಅರಿಯುವುದು ಎಲ್ಲಾ ರೀತಿಯಿಂದಲೂ ಅವಶ್ಯಕವಾಗಿದೆ.

ಸಮಾಜಶಾಸ್ತ್ರದ ಪ್ರಾಥಮಿಕ ಸಂಸ್ಥೆಯಾದ ವಿವಾಹವು ಗೃಹಸ್ಥಾಶ್ರಮವನ್ನು ಸ್ವೀಕರಿಸುವ ಪವಿತ್ರವಾದ ಸಾರ್ವತ್ರಿಕವಾದ ಸಂಸ್ಥೆಯಾಗಿದೆ. ಇಲ್ಲಿ ಸ್ತ್ರೀ ಪುರುಷರ ತಮ್ಮ ಲೈಂಗಿಕ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದು ಮತ್ತು ಸಂತಾನೋತ್ಪತ್ತಿಯನ್ನು ಮಾಡುವ ಅಂಗೀಕಾರವನ್ನು ಸಮಾಜದಿಂದ ಪಡೆಯುವುದಾಗಿದೆ. ಗಿಲಿನ ಮತ್ತು ಗಿಲಿನರವರ ಪ್ರಕಾರ: ವಿವಾಹ ಸಂತಾನೋತ್ಪತ್ತಿ ಮಾಡುವ ಮತ್ತು ಕುಟುಂಬವನ್ನು ಸ್ಥಾಪಿಸಲು ಸಮಾಜದಿಂದ ಮನ್ನಣೆ ಪಡೆದ ಮಾರ್ಗವಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.ವೆಸ್ಟರ್ ಮಾರ್ಕರವರ ಪ್ರಕಾರ "ಪ್ರಜೋತ್ಪಾದನೆ ಕ್ರಿಯೆಯಾದ ಶಿಶುವಿನ ಜನನದವರೆಗೆ ಮಾತ್ರ ಮುಂದುವರೆಯದೆ ಧೀರ್ಘಕಾಲ ಬಾಳಿಕೆ ಬರುವ ಗಂಡ ಹೆಂಡಿರ ಸಮೂಹ" ಎಂದು ಕರೆದಿದ್ದಾರೆ.

## ವ್ಯಾಖ್ಯೆಗಳು DEFINITION OF MARRIAGE

ಆ್ಯಂಡರಸನ್‌ರವರ ಹಾಗೂ ಪಾರ್ಕರ್‌ವರವರ ಪ್ರಕಾರ :" ಒಬ್ಬ ಅಥವಾ ಹೆಚ್ಚು ಪುರುಷರು ಒಬ್ಬ ಅಥವಾ ಹೆಚ್ಚು ಜನ ಸ್ತ್ರೀಯರೊಡನೆ ಕೂಡಿಕೊಂಡು, ಸಂಪ್ರದಾಯ ಹಾಗೂ ಕಾನೂನಿನಿಂದ ಅಮಗಿಕರಿಸಲ್ಪಟ್ಟ, ಕೆಲ ಆಚಾರಗಲನ್ನೊಲಗೊಂಡು, ಕೆಲಕಾಲ ಬಾಳುವೆ ನಡೆಸುವ ಕ್ರಮವೇ ವಿವಾಹ" ದಂದು ಕರೆದಿದ್ದಾರೆ.

ಬ್ರಾನಿಸೋ ಮ್ಯಾಲಿನೋಸ್ಕಿ: ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ, ಪೋಷಣೆಗಾಗಿ ಸ್ತ್ರೀ ಪುರುಷರು ಮಾಡಿಕೊಂಡ ಒಪ್ಪಂದವೇ ವಿವಾಹ" ಎಂದು ಕರೆದಿದ್ದಾರೆ.

ಆರ್. ಎಚ್. ಲೋವಿ: ವಿವಾಹ ಎಂದರೆ" ಅನುಮತಿ ದೊರಕಲ್ಪಡುವ ಸಂಗಾತಿಗಳ ಹೆಚ್ಚು ಕಡಿಮೆ ಶಾಶ್ವತ ಒಕ್ಕೂಟವೆ ವಿವಾಹವೆಂದು ಕರೆದಿದ್ದಾರೆ.

ಲುಂಡಬರ್ಗರವರ ಪ್ರಕಾರ: ವಿವಾಹವು ಪತಿಪತ್ನಿಯರು ಹೊಂದಿರಬೇಕಾದ ಹಕ್ಕು, ಕರ್ತವ್ಯ ಹಾಗು ಸವಲತ್ತುಗಳನ್ನು ವ್ಯಖ್ಯಾನಿಸುವ ನಿಯಮ ನಿಬಂಧನೆಗಳನ್ನು ಒಳಗೊಂಡಿರುತ್ತದೆ"ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಹರ್ಟನ ಮತ್ತು ಹಂಟರವರ ಪ್ರಕಾರ: " ವಿವಾಹವು ಸಾಮಾಜಿಕ ವಿಧಾನದ ಅನುಮೋದನೆಯಲ್ಲಿ ಇಬ್ಬರು ಅಥವಾ ಹೆಚ್ಚಿನವರು ಕುಟುಂಬವನ್ನು ಸ್ಥಾಪಿಸಬಹುದಾಗಿದೆ' ಎಂದಿದ್ದಾರೆ.

## ವಿವಾಹದ ಮಹತ್ವ IMPORTANCE OF STUDY OF MARRIAGE

1. ಕುಟುಂಬದ ಸ್ಥಾಪನೆಯನ್ನು ಮಾಡುವುದು — Marriages leads to the establishment of family
2. ಲೈಂಗಿಕ ಬಯಕೆಯ ಪೂರೈಕೆ — Satisfaction of sex
3. ಲೈಂಗಿಕ ಸಂಬಂಧಗಳನ್ನು ನಿಯಂತಿಸುವುದು — Control the sexual relationship
4. ಸಂತಾನೋತ್ಪತ್ತಿಗೆ ಅವಕಾಶ ಕೊಡುವುದು — Facilitate the procreation
5. ಅಂತಸ್ತನ್ನು ಒದಗಿಸುವುದು — Provide for status
6. ಆರ್ಥಿಕ ಸಹಕಾರವನ್ನು ಬೆಳೆಸುವುದು — Provides for economic cooperation
7. ಭಾವನಾತ್ಮಕ ಸಂಬಂಧ — Emotional ties
8. ಸಾಮಾಜಿಕ ಸಂಬಂಧಗಳನ್ನು ಬೆಳೆಸುವುದು — Develop the social relationship
9. ಸಾಮಾಜದ ಐಕ್ಯತೆಯನ್ನು ಸಾಧಿಸುವುದು — Achieve the social integration

## **ಕುಟುಂಬ FAMILY**

### ಪೀಠಿಕೆ:

ಸಾಮಾಜಿಕ ಸಂಸ್ಥೆಗಳು ನಿಯಮಗಲ ಒಟ್ಟು ಮೊತ್ತ ಎಂದು ಹೇಳಲಾಗುತ್ತದೆ. ಇಮ್ಮೈಲ್ ಡರ್ಖೀಮರು "ಸಾಮಾಜಿಕ ಸಂಸ್ಥೆಗಳ ಅಧ್ಯಯನವೆ ಸಮಾಜಶಾಸ್ತ್ರ ಎಂದು ಕರೆದಿದ್ದಾರೆ. ಸಮ್ನರ ಮತ್ತು ಕೆಲ್ಲರ್‌ರವರ ಹೇಳುವಂತೆ ಜೀವಿಗಳಿಗೆ ಜೀವಿಕಣವಾಗಿರುವಂತೆ ಸಮಾಜಕ್ಕೆ ಲೋಕರೂಢಿಗಳಿವೆ. ಸಂಸ್ಥೆಗಳು

ಸಮಾಜದ ಮೂಳೆಗಳು ಹಾಗೂ ಅಂಗಾಂಶಗಳು ಎಂದು ಕರೆದಿದ್ದಾರೆ. ಅದೆ ರೀತಿಯಲ್ಲಿ ಎಫ್. ಎಚ್. ಗಿಡ್ಡಿಂಗ್ಸ್‌ರವರು"ಸಂಸ್ಥೆಗಳು ಮಾನವ ಜನಾಂಗದ ಗತಕಾಲದ ಜೀವನದಲ್ಲಿ ಶ್ರೇಷ್ಠತರವಾದುದನ್ನು ಸಂಗ್ರಹಿಸಿ ಸಂರಕ್ಷಣೆ ಮಾಡುತ್ತವೆ" ಎಂದಿದ್ದಾರೆ.

## ಕುಟುಂಬದ ಅರ್ಥ MEANING OF FAMILY

ಕುಟುಂಬ ಮಾನವ ಜೀವಿಗಳ ಒಂದು ಸಮೂಹ. ಕುಟುಂಬವು ಗಂಡ, ಹೆಂಡತಿ, ಮಕ್ಕಳೂ ಮತ್ತು ಇತರೆ ಕೆಲ ಸಂಬಂಧಿಕರನ್ನು ಒಳಗೊಂಡಿರುವುದು. "ಫ್ಯಾಮಿಲಿ" ಎಂಬ ಶಬ್ದ ಲ್ಯಾಟಿನ್ ಭಾಷೆಯಲ್ಲಿ ಫ್ಯಾಮುಲಸ್ ಎಂಬ ಶಬ್ದದಿಂದ ಉತ್ಪತ್ತಿಯಾಗಿದೆ.। ಲ್ಯಾಟಿನ್ ಭಾಷೆಯಲ್ಲಿ ಫ್ಯಾಮುಲಸ್ ಎಂದರೆ ಆಳು ಮಗ ಎಂದರ್ಥವಾಗುವುದು. ಅಂದರೆ ಒಂದು ಕಾಲದಲ್ಲಿ ಕುಟುಂಬದಲ್ಲಿಯ ಆಳುಗಳನ್ನು ಆಳುಮಗ ಎಂದರೆ ಆ ಕುಟುಂಬದ ಮಗ ಎಂದು ಕರೆಯಲಾಗುತ್ತಿತ್ತು. ಆದರೆ ಇಂದು ಹಾಗೆ ಭಾವಿಸುತ್ತಿಲ್ಲ. ಇಂದು ನಾವು ಸಂತಾನರಹಿತ ಕುಟುಂಬಗಳನ್ನು ಕಾಣುತ್ತಿದ್ದೇವೆ.

## ವ್ಯಾಖ್ಯೆಗಳು: DEFINITION OF FAMILY

ಹಲವಾರು ಸಮಾಜಶಾಸ್ತ್ರಜ್ಞರು ಈ ಕುಟುಂಬದ ಬಗೆಗೆ ಅರ್ಥ ವಿವರಣೆಯನ್ನು ನೀಡಿದ್ದಾರೆ.

ಆಗ್ಬರ್ನ್ ಮತ್ತು ನಿಮ್ ಕಾಫ್ ಅವರ ಪ್ರಕಾರ "ಸಂತತಿ ಸಹಿತ ಇಲ್ಲವೆ ಸಂತತಿ ರಹಿತ ದೀರ್ಘಕಾಲ ಬಾಳಿಕೆ ಬರುವ ಗಂಡ ಹೆಂಡಿರ ಸಮೂಹವೆ ಕುಟುಂಬ ಎಂದಿದ್ದಾರೆ.

ಮೆಕಾಯಿವರ್ ಮತ್ತು ಪೇಜ್‌ರ ಅಭಿಪ್ರಾಯದಂತೆ " ಸಂತಾನೋತ್ಪತ್ತಿ ಮತ್ತು ಮಕ್ಕಳ ಪಾಲನೆ ಪೋಷಣೆಯ ಕಾರ್ಯಗಳನ್ನು ನಿರ್ವಹಿಸುವದರ ಸಲುವಾಗಿ ಲಿಂಗ ಸಂಬಂಧದ ಆಧಾರದ ಮೇಲೆ ರಚಿತವಾದ, ಸಾಕಷ್ಟು ಖಚಿತವಾದ ದೀರ್ಘಕಾಲ ಬಾಳಿಕೆ ಬರುವ ಸಮೂಹವೇ ಕುಟುಂಬ".

ಈಲಿಯಟ್ ಮತ್ತು ಮೆರಿಲ್ ಅವರು ಹೇಳುವಂತೆ "ಜೈವಿಕ ಸಾಮಾಜಿಕ ಸಂಬಂಧಗಳೊಂದಿಗೆ ಗಂಡ ಹೆಂಡತಿ ಮತ್ತು ಮಕ್ಕಳು ಬೆರೆತಿರುವುದೇ ಕುಟುಂಬ.

ಬರ್ಗೆಸ್ ಮತ್ತು ಲಾಕ್ ರವರ ಪ್ರಕಾರ "ಕುಟುಂಬವು ವಿವಾಹ, ರಕ್ತ ಅಥವಾ ದತ್ತಕದಿಂದ ಬಂಧಿತರಾದ ವ್ಯಕ್ತಿಗಳ ಸಮೂಹ.ಇವರು ಗಂಡ ಮತ್ತು ಹೆಂಡತಿ, ತಂದೆ ಮತ್ತು ತಾಯಿ, ಮಗ ಮತ್ತು ಮಗಳು,

ಸಹೋದರ ಮತ್ತು ಸಹೋದರಿ ಇತ್ಯಾದಿ ತಮ್ಮ ತಮ್ಮ ಸಾಮಾಜಿಕ ಪಾತ್ರಗಳಲ್ಲಿ ಪರಸ್ಪರರೊಂದಿಗೆ ಅಂತರಕ್ರಿಯೆ ಮತ್ತು ಸಂವಹನ ಹೊಂದಿ ಒಂದು ಸಾಮಾನ್ಯ ಸಂಸಕೃತಿಯನ್ನು ರೂಪಿಸಿ ಒಂದೇ ಮನೆಯಲ್ಲಿ ಬದುಕುತ್ತಾರೆ".

## ಕುಟುಂಬ ಅಧ್ಯಯನದ ಪ್ರಾಮುಖ್ಯತೆ IMPORTANCE OF STUDY OF FAMILY

| | | |
|---|---|---|
| 1. | ಕುಟುಂಬ ವಿಶ್ವ ವ್ಯಾಪಕವಾದದ್ದು | Universal family |
| 2. | ಕುಟುಂಬವು ಆದರ್ಶಗಳ ದ್ಯೋತಕವಾಗಿದೆ | Indicative of idealism |
| 3. | ಪ್ರಾರಂಭಿಕ ಪ್ರಭಾವ | Formative Influence |
| 4. | ಸಮಾಜದ ಕೇಂದ್ರಬಿಂದು | Center of society |
| 5. | ಕುಟುಂಬದ ಸ್ಥಿರತೆ ಮತ್ತು ಬದಲಾವಣೆ | Stable and change of family |
| 6. | ಸಾಮಾಜಿಕ ನಿಯಂತ್ರಣ | Social control |
| 7. | ಭಾವನಾತ್ಮಕ ಆಧಾರ | Emotional Basis |
| 8. | ಶಾಶ್ವತ ಮತ್ತು ತಾತ್ಕಾಲಿಕ ಸ್ವಭಾವ | Permanent and Temporary in Nature |
| 9. | ಲೈಂಗಿಕ ಸಂಬಂಧ | Sexual Relationship |
| 10. | ಧಾರ್ಮಿಕ ಸಂಸ್ಕಾರಗಳನ್ನು ನಿರ್ವಹಿಸುವ ಕ್ರಮ | Performing the Religious sanskar |
| 11. | ಆರ್ಥಿಕ ಅವಕಾಶಗಳು | Economic advantages |
| 12. | ಮೂಲಭೂತ ಅವಶ್ಯಕತೆಗಳ ಪೂರೈಕೆ | Satisfaction of Fundamental needs |
| 13. | ಸಂಸ್ಕೃತಿಯ ಸಂಚರಣೆ | Cultural Transmission |

## ಬಂಧುತ್ವ KINSHIP

ಸಮಾಜಶಾಸ್ತ್ರದ ಮೂಲಭೂತ ಕಲ್ಪನೆಯಲ್ಲಿ ಒಂದಾದ ಕುಟುಂಬ ಎಂಬ ಸಂಸ್ಥೆಯು ರಕ್ತ ಸಂಬಂಧಗಳಿಂದ ಕೂಡಿದ್ದು , ಪತಿ, ಪತ್ನಿ, ಅಪ್ಪ, ಅಮ್ಮ , ಅವಿವಾಹಿತ ಮಕ್ಕಳು, ಸಹೋದರ , ಸಹೋದರಿ, ಅಜ್ಜ, ಅಜ್ಜಿ ಮುಂತಾದ ಸಂಬಂಧಗಳನ್ನು ಹೊಂದಿರುವ ಪ್ರತಿಯೊಬ್ಬ ಪಾತ್ರವು ಸಮಾಜಕ್ಕೆ ಬಹಳ ಪ್ರಮುಖವಾಗಿದೆ. ಪ್ರತಿಯೊಂದು ಕುಟುಂಬ ಮತ್ತು ಸಮುದಾಯದಲ್ಲಿ ಜನರ ಸಮೂಹವು ಹಲವಾರು ಸಂಬಂಧಗಳಿಂದ ರೂಪಗೊಂಗು ಅದರದೆ ಆದ ಜವಾಬ್ದಾರಿಗಳಿಂದ ಕೂಡಿದ್ದು, ಬಂಧುತ್ವವು ಕುಟುಂಬದ ಸದಸ್ಯರ ಜೈವಿಕ ಅಥವಾ ದೈಹಿಕ ಲಕ್ಷಣಗಳಿಂದ ನಿರ್ಧರಿಸಲ್ಪಡುತ್ತದೆ. ಈ ಬಂಧುತ್ವವು ಸಂತಾನೋತ್ಪತ್ತಿಯ ಆಧಾರದ ಮೇಲೆ ಅವರ ಸಂಬಂಧವನ್ನು ಪ್ರತಿಪಾದಿಸುತ್ತದೆ. ಅದೇ ರೀತಿಯಾಗಿ ವ್ಯಕ್ತಿಯ ವಿವಾಹದಿಂದ ವೃತ್ತಿಯಿಂದ ಇತರ ವ್ಯವಹಾರಗಳಿಂದ ಇತರರ ಜೊತೆಗೆ ಸಂಬಂಧವನ್ನು ಕಲ್ಪಿಸಕೊಂಡಾಗ ಅದು ಮಾಧ್ಯಮಿಕ

ಸಂಬಂಧವಾಗುತ್ತದೆ. ಖ್ಯಾತ ಮಾನವಶಾಸ್ತ್ರಜ್ಞೆ, ಲೂಸಿಮೆಯವರ ಪ್ರಕಾರ "ಒಂದು ದೃಷ್ಟಿಯಲ್ಲಿ ಸಮುದಾಯದ ಎಲ್ಲ ಸದಸ್ಯರು ರಕ್ತ ಸಂಬಂಧಿಗಳೆ ಆಗಿರುತ್ತಾರೆ. ಬಂಧುತ್ವವೆಂಬುದು ಎಲ್ಲಾ ಸಮುದಾಯಗಳಲ್ಲಿಯೂ ಅಂಗೀಕರಿಸಲ್ಪಟ್ಟ ಸಾಮಾನ್ಯ ನಿಯಮವಾಗಿರುತ್ತದೆ."

KINSHIP The bond of blood or marriage which binds people together in group.

## ವ್ಯಾಖ್ಯೆಗಳು DEFINITION OF KINSHIP

ರಿವರ್ಸ್‌ರವರ ಪ್ರಕಾರ "ಸಾಮಾಜಿಕವಾಗಿ ಅಂಗೀಕರಿಸಲ್ಪಟ್ಟ ಶಾರೀರಿಕ ಸಂಬಂಧಗಳನ್ನು ಬಂಧುತ್ವ ಎಂದು ಕರೆದಿದ್ದಾರೆ. "

**ಎ.ಆರ್. ರ್‍ಯಾಡಿಫ್ ಬ್ರೌನ್‌ರವರ** ಪ್ರಕಾರ ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧವೇ ಬಂಧುತ್ವವಾಗಿರುತ್ತದೆ. ಈ ಸಂಬಂಧಗಳ ವ್ಯಾಪ್ತಿಯಲ್ಲಿನ ಯವುದೇ ಎರಡು ವ್ಯಕ್ತಿಗಳ ಸಂಬಂಧಗಳು ನಿಯಂತ್ರಣಕ್ಕೊಳಪಟ್ಟಿರುತ್ತವೆಯಲ್ಲದೆ ಒಂದಲ್ಲ ಒಂದು ಬಗೆಯ ಸಾಮಾಜಿಕ ಆಚರಣೆಗೆ ಒಳಪಟ್ಟಿರುತ್ತದೆ.

**ರಾಬಿನ್ ಫಾಕ್ಸ್ ರವರ ಪ್ರಕಾರ**: ಬಂಧುತ್ವವೆಂಬುದು ಬಂಧುಗಳ ನಡುವಣ ವಾಸ್ತವಿಕವಾದ ಅಥವಾ ನಂಬಲಾಗಿರುವ ಅಥವಾ ಕಾಲ್ಪನಿಕವಾದ ಸಂಬಂಧವನ್ನು ಸೂಚಿಸುತ್ತದೆ.

According to the Dictionary of Anthropology, kinship system includes socially recognized relationships based on supposed as well as actual genealogical ties. These relationships are the result of social interaction and recognized by society.

**According to Robin Fox:** Kinship is simply the relations between, Kin that is persons related by real, putative or fictive consanguinity

## ಬಂಧುತ್ವದ ಪ್ರಕಾರಗಳು

೧. ರಕ್ತ ಸಂಬಂಧದ ಬಂಧುತ್ವ Consanguineous Kinship

೨. ವಿವಾಹ ಸಂಬಂಧದ ಬಂಧುತ್ವ Affinal Kinship

## ಬಂಧುತ್ವದ ಮಜಲುಗಳು DEGREES OF KINSHIP

ವ್ಯಕ್ತಿ ವ್ಯಕ್ತಿಗಳ ನಡುವಣ ಸಂಬಂಧಗಳನ್ನು ವಿವಿಧ ರೂಪಗಳಲ್ಲಿ ಹಾಗೂ ಮಜಲುಗಳಲ್ಲಿ ಕಂಡುಬರುತ್ತದೆ. ಮೂಲ ಕುಟುಂಬದ ಅಸ್ತಿತ್ವದಿಂದಾಗಿ ವ್ಯಕ್ತಿಯು ಮೂರು ರೀತಿಯ ಬಂಧಗಳಲ್ಲಿ ಬಂಧಿತನಾಗುತ್ತಾನೆ. ಮಜುಂದರ ಹಾಗೂ ಮದನ್‌ರವರು ಈ ಶ್ರಣಿಗಳನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

೧. **ಪ್ರಾಥಮಿಕ ಬಂಧುತ್ವ:–** ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯೊಂದಿಗೆ ನೇರವಾದ ಸಂಬಂಧವನ್ನು ಹೊಂದಿರುತ್ತಾನೆ.ಒಟ್ಟು ೮ ಸಂಬಂಧಗಳಿವೆ. ಅವುಗಳೆಂದರೆ ಪತಿ–ಪತ್ನಿ, ತಂದೆ–ಮಗ, ತಾಯಿ–ಮಗ, ತಂದೆ–ಮಗಳೂ, ತಾಯಿ–ಮಗಳು, ಅಣ್ಣ–ತಮ್ಮ, ಅಕ್ಕ–ತಂಗಿ, ಸಹೋದರ– ಸಹೋದರಿ.

೨. **ಮಾಧ್ಯಮಿಕ ಸಂಬಂಧ:–** ವ್ಯಕ್ತಿಯು ಪ್ರಾಥಮಿಕ ಸಂಬಂಧಿಯಿಂದಾಗಿ ಸಂಬಂಧಿಕನಾಗಿದ್ದಾರೆ.ಆತನನ್ನು ಮಾಧ್ಯಮಿಕ ಸಂಬಂಧಿ ಎನ್ನುತ್ತಾರೆ. ಉದಾ: ತಂದೆಯ ಸಹೋದರ, ಸಹೋದರಿಯ ಪತಿ, ಸಹೋದರನ ಪತ್ನಿ, ಇಲ್ಲಿಮಾನವ ಶಾಸ್ತ್ರಜ್ಞರು ೩೩ ಮಾಧ್ಯಮಿಕ ಸಂಬಂಧಗಳನ್ನು ಗುರುತಿಸಿದ್ದಾರೆ.

೩. **ತೃತಿಯ ಸಂಬಂಧ:–** ಪ್ರಾಥಮಿಕ ಸಂಬಂಧಿಯೊಬ್ಬನ ಮಾಧ್ಯಮಿಕ ಸಂಬಂಧಿಗಳನ್ನು ತೃತಿಯ ಸಂಬಂಧ ಎನ್ನುತ್ತಾರೆ. ಮಾನವ ಶಾಸ್ತ್ರಜ್ಞರು ಇಲ್ಲಿ ೧೫೧ ಸಂಬಂಧಗಳನ್ನು ಗುರುತಿಸಿದ್ದಾರೆ. ಉದಾ: ಸಹೋದರಿಯ ಪತಿಯ ಸಹೋದರ, ತಂದೆಯ ತಂಗಿಯ ಮಗ /ಮಗಳು, ಹೆಂಡತಿಯ ತಂಗಿಯ ಪತಿ.

## ಬಂಧುತ್ವದ ಬಳಕೆಗಳು

ಮೂಲ ಕುಟುಂಬ ಅವಿಭಕ್ತ ಕುಟುಂಬ ಹಾಗೂ ಕುಲ ಮುಂತಾದ ಬಂಧುತ್ವದ ಗುಂಪುಗಳಲ್ಲಿ ವ್ಯಕತಿಗಳ ಮಧ್ಯ ನಡವಳಿಕಗೆಗಳು ನರ್ದಿಷ್ಟವಾಗಿ ಶಾಶ್ವತವಾಗಿ ವ್ಯವಸ್ಥೆಗೊಳಿಸಲ್ಪಟ್ಟಿರುತ್ತವೆ. ಒಂದು ಗುಂಪಿಗೆ ಸೇರಿದ ವ್ಯಕ್ತಿ ಯಾವ ರೀತಿ ಪರಸ್ಪರ ಸಂಬೋಧಿಸಬೇಕು ಮತ್ತಯ ಯಾವ ರೀತಿ ವರ್ತಿಸಬೇಕು ಎನ್ನುವ ಕೆಲವು ನಿಯಮಗಳನನು ಅನುಸರಿಸುತ್ತಾರೆ, ಇವುಗಳನ್ನು ಬಳಕೆಗಳು ಎನ್ನುತ್ತಾರೆ.

| | |
|---|---|
| ೧ ದೂರವಿಡುವಿಕೆ | Rule of Avoidance |
| ೨ ವಿನೋದ ಸಂಬಂಧಗಳು | Joking Relationshipa |
| ೩ ಶಿಶುಮೂಲ ಸಂಬಂಧಗಳು | Technonymy |
| ೪. ಮಾತೃಪ್ರಧಾನ ಸಂಬಂಧಗಳು | Avunculate |
| ೫. ಪಿತೃಭಗಿನಿ ಸಂಬಂಧಗಳು | Amitatel |
| ೬. ಪ್ರಸೂತಿಕಾ ಧರ್ಮಾರೋಪಣೆ | Couvade |

## ಬಂಧುತ್ವ ಅಧ್ಯಯನದ ಪ್ರಾಮುಖ್ಯತೆ IMPORTANCE OF STUDY OF KINSHIP

1 ತಮ್ಮ ಜೀವನಾವಶ್ಯಕ ವಸ್ತುಗಳನ್ನು ಪೂರೈಸಿಕೊಳ್ಳುವುದು

Satisfaction of fundamental needs

2 ಸದಸ್ಯರು ಪರಸ್ಪರ ಅವಲಂಬಿತರಾಗಿರುತ್ತಾರೆ.

Members are Interdependent to each other

3 ಜೀವನದ ಗಂಡಾಂತರಗಳನ್ನು ಎದುರಿಸುವುದಕ್ಕಾಗಿ

To face the troubles

4 ಬಂಧುತ್ವವು ಹುಟ್ಟಿನಿಂದಲೆ ನಿರ್ಧರಿಸಲ್ಪಡುತ್ತದೆ

Kinship came by birth

5 ಧಾರ್ಮಿಕ ವಿಧಿಗಳನ್ನು ಆಚರಿಸಲು

To perform religion rituals

6 ಬಂಧುತ್ವವು ಮಾತಾ ಪಿತೃಗಳ ಸಂಬಂಧದಿಂದ ವೃದ್ಧಿಗೊಳ್ಳುತ್ತದೆ

It increases by the parents relations

7 ಸಾಮಾಜಿಕ ಬಂಧುತ್ವವು ವಯಸ್ಸು ಲಿಂಗ, ಜಾತಿ, ಮತ, ಜನಾಂಗಗಳನ್ನು ಅವಲಂಬಿಸಿರುತ್ತದೆ

It governed by of social relationship

8 ರಕ್ತಸಂಬಂಧಗಳು ವಿಶಾಲವಾಗಿರುತ್ತವೆ

Blood relationships are Wide range

9 ಪತಿ ಪತ್ನಿ ಮತ್ತು ಮಕ್ಕಳ ನಡುವಿರುವ ಸಂಬಂಧಗಳನ್ನು ವಿವರಿಸುತ್ತದೆ

Explains relationship between husband and wife

10 ಸದಸ್ಯರ ನಡುವಿನ ಅನ್ಯೋನ್ಯತೆಯನ್ನು ಸೂಚಿಸುತ್ತದೆ

It indicates close relationship between members

## ಆಧಾರ ಗ್ರಂಥಗಳು


- ಪ್ರೋ.ಜಿ. ಸುಬ್ರಮಣ್ಯ (2017) ಸಮಕಾಲೀನ ಸಮಾಜಶಾಸ್ತ್ರ ಸಪ್ನ ಬುಕ್ ಹೌಸ 3ನೇ ಮುಖ್ಯ ರಸ್ತೆ, ಗಾಂಧಿನಗರ ಬೆಂಗಳೂರು
- ಎಸ್. ಬಿ. ಜೋಗುರ (2008) ಸಮಾಜಶಾಸ್ತ್ರ ವಿಜೇತ್ ಪ್ರಕಾಶನ ಗದಗ

- ಚ.ನ ಶಂಕರರಾವ್ ಸಮಾಜಶಾಸ್ತ್ರದ ಸಮಸ್ಯೆಗಳು

PREPARED BY

Dr. A. G. Khan Associate professor of Sociology GFGC Chittapur

Dr. Manikamma. N. Sultanpur, Asst. Prof. of Sociology, Smt. C. B. Patil Degree College Chincholi

## THANK YOU

STAY HOME, STAY SAFE AND STUDY STEADILY